2018 ಕ.ತೀ.ವ 107

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಮ್ ಮೋಹನ್ ರೆಡ್ಡಿ

## ವ್ಯವಸ್ಥಾಪಕರು, ನ್ಯಾಷನಲ್ ವಿಮಾ ಕಂಪನಿ ನಿಯಮಿತ -ವಿರುದ್ಧ- ರಷೀದ್ ಖಾನ್ ಮತ್ತು ಇತರರು*

ಮೋಟಾರು ವಾಹನಗಳ ಅಧಿನಿಯಮ, 1988ರ 173(1)ನೇ ಪ್ರಕರಣದಡಿಯಲ್ಲಿ ಸಲ್ಲಿಸಲಾದ ಸಂಕೀರ್ಣ ಮೊದಲ ಅಪೀಲು.

ಮೋಟಾರು ಅಪಘಾತದಲ್ಲಿ ಗಾಯಗೊಂಡ ಕ್ಲೇಮುದಾರನು ಸಲ್ಲಿಸಿದ ಕ್ಲೇಮು ಅರ್ಜಿಯನ್ನು ಪರಿಗಣಿಸಿದ ಮೋಟಾರು ಅಪಘಾತಗಳ ಕ್ಲೇಮುಗಳ ನ್ಯಾಯಾಧಿಕರಣವು ನೀಡಿದ ತೀರ್ಪು ಹಾಗೂ ಐತೀರ್ಪನ್ನು ಪ್ರಶ್ನಿಸಿ ವಿಮಾ ಕಂಪನಿಯಿಂದ ಪ್ರಸ್ತುತ ಅಪೀಲನ್ನು ಸಲ್ಲಿಸಲಾಗಿದೆ.

ಮಾಲೀಕ/ವಿಮೆದಾರನು 'ಅಧಿನಿಯಮ'ದ 134(ಸಿ) ಪ್ರಕರಣಕ್ಕೆ ಅನುಸಾರವಾಗಿರಲಿಲ್ಲವೆಂದು ಮತ್ತು 2ನೇ ಎದುರುದಾರ/ವಿಮಾದಾರನು ಇತರ ಎದುರುದಾರರೊಂದಿಗೆ ಹಾಗೂ ಪೋಲೀಸು ಅಧಿಕಾರಿಗಳೊಂದಿಗೆ ಸೇರಿ ಒಳಸಂಚು ಮಾಡಿ ಅನುಚಿತ ಲಾಭಕ್ಕಾಗಿ ಸವಾರ/ಮೊದಲನೇ ಎದುರುದಾರನ ಜೊತೆ ಒಳಸಂಚಿಗೆ ತೊಡಗಿ ಚಾಲಕನ ಹೆಸರನ್ನು ಬದಲಾಯಿಸುವ ಮೂಲಕ ಸುಳ್ಳು ಪ್ರಕರಣವನ್ನು ದಾಖಲಿಸಿದ್ದಾರೆಯೆಂದು ಆಪಾದಿಸಲಾಗಿದೆ.

ಅಷ್ಟೇ ಅಲ್ಲದೆ, 2ನೇ ಎದುರುದಾರ/ಮಾಲೀಕ ವಿಮೆದಾರನು, ವಿಮಾ ನೀತಿಯ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿದ್ದು, ಸಿಂಧುವಾದ ಚಾಲನಾ ಲೈಸೆನ್ಸ್ ಇಲ್ಲದೆ ಅಪಘಾತ ಸಮಯದಲ್ಲಿ ಸವಾರಿ ಮಾಡುತ್ತಿದ್ದನೆಂದು ಆಪಾದಿಸಲಾಗಿತ್ತು.

*ಸಂಕೀರ್ಣ ಮೊದಲನೇ ಅಪೀಲು ಸಂಖ್ಯೆ: 4468/2012 (ಎಂವಿ), ದಿನಾಂಕ: 28ನೇ ಮಾರ್ಚ್, 2016.

ಮೇಲಿನ ಸಂಗತಿಗಳು, ಸನ್ನಿವೇಶಗಳು ಮತ್ತು ಸಾಕ್ಷ್ಯವು, 1ನೇ ಎದುರುದಾರ ಹಬೀಬುಲ್ಲಾ ಖಾನನು, ಎರಡನೇ ಎದುರುದಾರ/ಮಾಲೀಕ/ವಿಮಾಕರ್ತ ಮತ್ತು ಪೋಲೀಸು ಪ್ರಾಧಿಕಾರಿಗಳೊಂದಿಗೆ ಶಾಮೀಲಾಗಿ, ವಿಮಾ ಪಾಲಿಸಿಯಲ್ಲಿರುವ ನಷ್ಟಭರ್ತಿಯ ಖಂಡವನ್ನು ಅನುಸರಿಸುವ ಮೂಲಕ ಅಪೀಲುದಾರನಿಂದ ನಷ್ಟಪರಿಹಾರವನ್ನು ಪಡೆದುಕೊಳ್ಳಲು ಕ್ಲೇಮುದಾರನನ್ನು ಶಕ್ತಗೊಳಿಸುವ ಮೂಲಕ ಕಾನೂನು ಬಾಹಿರ ಲಾಭವನ್ನು ಮಾಡಿಕೊಳ್ಳಲು ಶಾಮೀಲಾಗಿರುವರು ಎಂಬ ಆಪಾದನೆಯನ್ನು ರುಜುವಾತುಪಡಿಸಿಲ್ಲ.

ದಾಖಲೆಯಲ್ಲಿರುವ ಸಾಕ್ಷ್ಯಧಾರಗಳನ್ನು ಸರಿಯಾಗಿ ಪರಿಗಣಿಸಿದ ನಂತರ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಯುಕ್ತ ಗುಣಾರ್ಹತೆಗಳಿಂದ ಸಂಪೂರ್ಣವಾಗಿ ಸಮರ್ಥಿಸಲಾಗಿದೆ ಮತ್ತು ಈ ತೀರ್ಪಿನಲ್ಲಿ ಕಾನೂನಿನಲ್ಲಿ ಯಾವುದೇ ದೌರ್ಬಲ್ಯ ಇರುವುದನ್ನು ಅಥವಾ ಯಾವುದೇ ತರ್ಕ ವಿರುದ್ಧದ ಕಾರಣದಿಂದ ಸಾಕ್ಷ್ಯವಿಲ್ಲದ್ದನ್ನು ತೋರಿಸಿಲ್ಲ ಹಾಗಾಗಿ ಇಲ್ಲಿ, ವಿಭಿನ್ನ ಅಂತ್ಯ ಮತ್ತು ಹಸ್ತಕ್ಷೇಪ ಮಾಡುವ ಅಗತ್ಯವು ಕಂಡುಬರುವುದಿಲ್ಲ.'

ಇದರೊಂದಿಗೆ ವಿಮೆ ಪಾಲಿಸಿದಾರರಿಗೆ ಸೂಕ್ತ ಹಾಗೂ ಸಕಾಲದಲ್ಲಿ ಬೇಕಾಗಿರುವ ನೆರವನ್ನು ನೀಡುವುದರ ಬದಲಾಗಿ, ಅನಗತ್ಯ ಆರೋಪಗಳನ್ನು ಮಾಡುತ್ತಾ ಕಾಲ ವಿಳಂಬ ಮಾಡಿರುವ ವಿಮಾ ಕಂಪನಿಗೆ 10,000/– ರೂ.ಗಳ ವೆಚ್ಚವನ್ನು ವಿಧಿಸುವುದರೊಂದಿಗೆ ಪ್ರಸ್ತುತ ಅಪೀಲನ್ನು ವಜಾಗೊಳಿಸಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

1. *ಎಐಆರ್ 2000 ಎಸ್‌ಸಿ 1165*
   *ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್*
   *–ವಿರುದ್ಧ– ರಾಜೇಶ್ ಸಿಂಗ್ ಮತ್ತು ಇತರರು (ಉಲ್ಲೇ) 8*
2. *ಎಐಆರ್ 2002 ಎಸ್‌ಸಿ 3350*
   *ನ್ಯಾಷನಲ್ ಇನ್‌ಶೂರೆನ್ಸ್ ಕಂಪನಿ ನಿಯಮಿತ*
   *–ವಿರುದ್ಧ– ನಿಕೊಲೆಟ್ಟ ರೋಹಟಗಿ ಮತ್ತು ಇತರರು (ಉಲ್ಲೇ) 8*

3. *ಎಐಆರ್ 1951 ಎಸ್‌ಸಿ 280*
   *ಬಿಶುಂಡಿಯಾ ನರೈನ್ ಮತ್ತು ಮತ್ತೊಬ್ಬರು –ವಿರುದ್ಧ–*
   *ಸೆಯೋಗೆಣಿ ರೈ ಮತ್ತು ಇತರರು (ಉಲ್ಲೇ) 18*
4. *ಎಐಆರ್ 1977 ಎಸ್‌ಸಿ 615*
   *ವರನಸಯ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಇನ್ನೊಬ್ಬರು*
   *–ವಿರುದ್ಧ– ಡಾ॥ ರಾಜ್‌ಕಿಶೋರ್ ತ್ರಿಪತಿ*
   *ಮತ್ತು ಮತ್ತೊಬ್ಬರು (ಉಲ್ಲೇ) 19*
5. *ಎಐಆರ್ 1967 ಎಸ್‌ಸಿ 878*
   *ಸುಭಾಸ್ ಚಂದ್ರ ದಾಸ್ ಮುಶಿಬ್ –ವಿರುದ್ಧ–*
   *ಗಂಗಾ ಪ್ರಸಾದ್ ದಾಸ್ ಮುಶಿಬ್ ಮತ್ತು ಇತರರು (ಉಲ್ಲೇ) 19*
6. *ಎಐಆರ್ 1976 ಎಸ್‌ಸಿ 163*
   *ಅಫ್ಸರ್ ಶೇಕ್ ಮತ್ತು ಇನ್ನೊಬ್ಬರು –ವಿರುದ್ಧ–*
   *ಸುಲೇಮಾನ್ ಬೀಬಿ ಮತ್ತು ಇತರರು (ಉಲ್ಲೇ) 20*
7. *ಎಐಆರ್ 1963 ಎಸ್‌ಸಿ 1279*
   *ಲದ್ಲಿ ಪ್ರಶಾದ್ ಜೈಸ್ವಾಲ್ –ವಿರುದ್ಧ–*
   *ದಿ ಕರ್ನೋಲ್ ಡಿಸ್ಟಿಲರಿ ಕಂಪನಿ ಲಿಮಿಟೆಡ್, ಕರ್ನೂಲ್*
   *ಮತ್ತು ಇತರರು (ಉಲ್ಲೇ) 21*
8. *(1818)5 ಎಸಿ 685*
   *ವೆಲ್ಲಿಂಗ್‌ಫೋರ್ಡ್ –ವಿರುದ್ಧ–*
   *ಮ್ಯೂಚುಯಲ್ ಫಂಡ್ ಸೊಸೈಟಿ (ಉಲ್ಲೇ) 22*
9. *2004(8) ಎಸ್‌ಸಿಸಿ 588*
   *ಎ.ಸಿ. ಅನಂತಸ್ವಾಮಿ ಮತ್ತು ಇತರರು –ವಿರುದ್ಧ–*
   *ಬೋರಯ್ಯ ಮೃತರಾಗಿರುವುದರಿಂದ ಇವರ*
   *ಕಾನೂನು ಸಮ್ಮತ ವಾರಸುದಾರರು (ಉಲ್ಲೇ) 23*
10. *ಎಐಆರ್ 2003 ಕೆಎಎನ್‌ಟಿ 434(ಡಿಬಿ)*
    *ಕೆಂಚವ್ವ –ವಿರುದ್ಧ– ಅಮೊಗೊಂಡ ಮತ್ತು ಇತರರು (ಉಲ್ಲೇ) 24*

*11. ಎಐಆರ್ 2004 ಎಸ್‌ಸಿ 3884*
*ನ್ಯೂ ಇಂಡಿಯಾ ಅಶ್ಯುರೆನ್ಸ್ ಕಂಪನಿ ಲಿಮಿಟೆಡ್*
*–ವಿರುದ್ಧ– ಕಿರಣ್ ಸಿಂಗ್ ಮತ್ತು ಇತರರು (ಉಲ್ಲೇ) 34*

ಅಪೀಲುದಾರರ ಪರ: ಶ್ರೀ ಎ.ಎನ್. ಕೃಷ್ಣಸ್ವಾಮಿ, ವಕೀಲರು;
1ನೇ ಪ್ರತ್ಯಪೀಲುದಾರರ ಪರ: ಶ್ರೀ ಎಂ. ರವೀಂದ್ರನಾಥ್, ವಕೀಲರು,
(2 ಮತ್ತು 3ನೇ ಪ್ರತ್ಯಪೀಲುದಾರರಿಗೆ ಪತ್ರಿಕಾ ಪ್ರಕಟಣೆ ಮೂಲಕ ನೀಡಲಾದ ನೋಟೀಸ್‌ನ್ನು ಅಂಗೀಕರಿಸಲಾಗಿದೆ).

## ತೀರ್ಪು

**ನ್ಯಾಯಮೂರ್ತಿ ಶ್ರೀ ರಾಮ್ ಮೋಹನ್ ರೆಡ್ಡಿ:**

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ತ್ವರಿತಗತಿ ನ್ಯಾಯಾಲಯ–II ಶಿವಮೊಗ್ಗ ಇವರು (ಸಂಕ್ಷಿಪ್ತತೆಗಾಗಿ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ) ಎಂವಿಸಿ 568/2009ರಲ್ಲಿನ ದಿನಾಂಕ 17ನೇ ನವೆಂಬರ್ 2011ರ ತೀರ್ಪು ಮತ್ತು ಐತೀರ್ಪಿನಿಂದ ಬಾಧಿತರಾದ ಅಪರಾಧವೆಸಗಿದ ಮೋಟಾರು ಸೈಕಲ್‌ನ ವಿಮಾಗಾರನು ಈ ಅಪೀಲನ್ನು ಸಲ್ಲಿಸಿದ್ದಾರೆ.

2. ಸಂಗತಿಗಳನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಲಾಗಿದೆ:

(i) ಮೊದಲನೇ ಎದುರುದಾರನು, ತನ್ನ ಮನೆಯಿಂದ ಎನ್.ಟಿ. ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್ ಬಳಿಯಿರುವ ಹಿಟ್ಟಿನ ಗಿರಣಿ ಕಡೆಗೆ ಹೋಗುವ ತನ್ನ ಮನೆಯಿಂದ ಕೆಎ–14/ಕೆ–9726ರ ನೋಂದಣಿ ಪ್ರಮಾಣ ಪತ್ರ ಹೊಂದಿರುವ ತನ್ನ ಟಿವಿಎಸ್ ಎಕ್ಸ್‌ಎಲ್ ಅನ್ನು ನಡೆಸಿಕೊಂಡು ಹೋಗುತ್ತಿರುವಾಗ, ಎರಡನೇ ಎದುರುದಾರ/ಹಬೀಬುಲ್ಲಾ ಖಾನನು, ಆಪಾದಿಸಿರುವಂತೆ, ಸಂದೇಶ್ ಮೋಟಾರ್ಸ್ ಕಡೆಯಿಂದ ಅತೀ ವೇಗವಾಗಿ

ಅತ್ಯಾತುರ ಮತ್ತು ನಿರ್ಲಕ್ಷ್ಯ ರೀತಿಯಲ್ಲಿ ಕೆಎ–14/ಡಬ್ಲ್ಯೂ–8664ರ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರುವ ಹೀರೋ ಹೊಂಡಾ ಸ್ಪ್ಲೆಂಡರ್ ಮೋಟಾರು ಸೈಕಲ್‌ಅನ್ನು ಚಾಲನೆ ಮಾಡಿಕೊಂಡು ಟಿವಿಎಸ್ ಮೊಪೆಡ್‌ಗೆ ಡಿಕ್ಕಿ ಹೊಡೆದು, ಆ ಕಾರಣದಿಂದ 1ನೇ ಎದುರುದಾರನು ವಾಹನದಿಂದ ಕೆಳಗಡೆ ಬಿದ್ದು ಗಾಯಗೊಂಡಿರುತ್ತಾನೆ ಮತ್ತು ಆತನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಆನಂತರ ಇಲ್ಲಿಂದ ನಂಜಪ್ಪ ಆಸ್ಪತ್ರೆಗೆ ವರ್ಗಾಯಿಸಲಾಗಿತ್ತು ಮತ್ತು ಇಲ್ಲಿಂದ ಮಣಿಪಾಲ್‌ನ ಕೆಎಂಸಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಇಲ್ಲಿ ಒಂದು ತಿಂಗಳವರೆಗೆ ಚಿಕಿತ್ಸೆಯನ್ನು ವಿಸ್ತರಿಸಲಾಗಿತ್ತು ಮತ್ತು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ ನಂತರ ಚಿಕಿತ್ಸೆಯನ್ನು ಮುಂದುವರಿಸಲಾಗಿತ್ತು ಎಂದು ರಸ್ತೆ ಸಂಚಾರ ಅಪಘಾತದಲ್ಲಿ ಆದ ಗಾಯುಗಳ ಸಂಬಂಧದಲ್ಲಿ ನಷ್ಟಪರಿಹಾರವೆಂದು 13,15,000/– ರೂ.ಗಳನ್ನು ಕೋರಿ, ಮೋಟಾರು ವಾಹನ ಅಧಿನಿಯಮ, 1988ರ (ಸಂಕ್ಷಿಪ್ತತೆಗಾಗಿ 'ಅಧಿನಿಯಮ') 166ನೇ ಪ್ರಕರಣವನ್ನು ಅನ್ವಯಿಸಿ ಕ್ಲೇಮು ಅರ್ಜಿಯನ್ನು ಹೂಡಿದ್ದಾನೆ.

(ii) ಮೊದಲನೇ ಎದುರುದಾರ/ಕ್ಲೇಮುದಾರನು ಪ್ರತೀ ತಿಂಗಳಿಗೆ 25,000/– ರೂ.ಗಳನ್ನು ಗಳಿಸುವ ಪ್ಲಾಸ್ಟಿಕ್ ಇಂಡಸ್ಟ್ರಿಯ ಮಾಲೀಕನಾಗಿದ್ದು, ಅಪಘಾತ ನಡೆದ ದಿನಾಂಕದಂದು 50 ವರ್ಷ ವಯಸ್ಸಾಗಿದ್ದು, ಶಾಶ್ವತ ಅಂಗವಿಕಲತೆಯ ಕಾರಣದಿಂದ ಕೈಗಾರಿಕೆಯನ್ನು ನಡೆಸಲು ಅಸಾಧ್ಯವಾಗಿರುತ್ತದೆ. ಜೊತೆಗೆ ಅವನೊಬ್ಬನೇ ತನ್ನ ಕುಟುಂಬದಲ್ಲಿ ಗಳಿಸುತ್ತಿರುವ ವ್ಯಕ್ತಿಯಾಗಿದ್ದನು ಎಂದು ಕ್ಲೇಮು ಮಾಡಿರುತ್ತಾನೆ.

(iii) ಅಪೀಲುದಾರ /ವಿವಾಗಾರನನ್ನು 3ನೇ ಎದುರುದಾರನಾಗಿರುವಾಗ ಕ್ಲೇಮು ಅರ್ಜಿಯಲ್ಲಿ ಎರಡನೇ ಎದುರುದಾರನೆಂದು ಆಪಾದಿಸಲಾದ 3ನೇ ಸಂಖ್ಯೆಯು

ಎದುರುದಾರನನ್ನು ಅಪರಾಧವೆಸಗಿದ ಮೋಟಾರು ಸೈಕಲ್‌ನ ಮಾಲೀಕನೆಂದು ಹೇಳಲಾಗಿದೆ.

(iv) ಕ್ಲೇಮು ಅರ್ಜಿಯಲ್ಲಿ ನೋಟೀಸ್‌ನ್ನು ಹೊರಡಿಸಿದ್ದರೂ ಅಪೀಲುದಾರನ ಆಕ್ಷೇಪಣೆಗಳ ವಿವರಣೆಯನ್ನು ಸಲ್ಲಿಸುವ ಮೂಲಕ ಕ್ಲೇಮನ್ನು ಪ್ರತಿರೋಧಿಸುವಾಗ ಅಪರಾಧವೆಸಗಿದ ಮೋಟಾರು ಸೈಕಲ್‌ನ ಸವಾರ ಮತ್ತು ಮಾಲೀಕನು ಗೈರುಹಾಜರಾಗಿದ್ದು, ಪ್ರತಿನಿಧಿಸಿರುವುದಿಲ್ಲ. ಆದುದರಿಂದ, ಏಕಪಕ್ಷೀಯವಾಗಿ ಇಡಲಾಗಿದ್ದು, ಇವೆಲ್ಲವುಗಳ ಜೊತೆಗೆ ಅಪಘಾತ ನಡೆದ ದಿನಾಂಕ ಮತ್ತು ಸಮಯದಲ್ಲಿ ಜಾರಿಯಲ್ಲಿದ್ದ ವಿಮಾ ಪಾಲಿಸಿಯ ವಿವಾದಾಂಶವನ್ನು ಒಪ್ಪಿಕೊಳ್ಳುವಾಗ, ಅಪಘಾತವನ್ನು ನಿರಾಕರಿಸಲಾಗಿದೆ.

(v) ಪ್ರತಿವಾದದಲ್ಲಿ, ಕ್ಲೇಮುದಾರನ ಅತ್ಯಾತುರ ಮತ್ತು ನಿರ್ಲಕ್ಷ್ಯದ ಕಾರಣದಿಂದ ಆಪಾದಿತ ಅಪಘಾತವು ಸಂಭವಿಸಿದೆಯೆಂದು, ಇವರು ಸಿಂಧುವಾದ ಮತ್ತು ಪರಿಣಾಮಕಾರಿ ಚಾಲನಾ ಲೈಸೆನ್ಸ್‌ನ್ನು ಹೊಂದಿರಲಿಲ್ಲವೆಂದು ಮತ್ತು ಅಪಘಾತವನ್ನು ಮಾಡಿರುವರೆಂದು ತಿಳಿಸಲಾಗಿತ್ತು.

(vi) ಮಾಲೀಕ/ವಿಮೆದಾರನು 'ಅಧಿನಿಯಮ'ದ 134(ಸಿ) ಪ್ರಕರಣಕ್ಕೆ ಅನುಸಾರವಾಗಿರಲಿಲ್ಲವೆಂದು ಮತ್ತು 2ನೇ ಎದುರುದಾರ/ವಿಮಾದಾರನು ಇತರ ಎದುರುದಾರರೊಂದಿಗೆ ಹಾಗೂ ಪೊಲೀಸು ಅಧಿಕಾರಿಗಳೊಂದಿಗೆ ಸೇರಿ ಒಳಸಂಚು ಮಾಡಿ ಅನುಚಿತ ಲಾಭಕ್ಕಾಗಿ ಸವಾರ/ಮೊದಲನೇ ಎದುರುದಾರನ ಜೊತೆ ಒಳಸಂಚಿಗೆ ತೊಡಗಿ ಚಾಲಕನ ಹೆಸರನ್ನು ಬದಲಾಯಿಸುವ ಮೂಲಕ ಸುಳ್ಳು ಪ್ರಕರಣವನ್ನು ದಾಖಲಿಸಿದ್ದಾರೆಯೆಂದು ಆಪಾದಿಸಲಾಗಿದೆ.

(vii) ಅಷ್ಟೇ ಅಲ್ಲದೆ, 2ನೇ ಎದುರುದಾರ/ಮಾಲೀಕ ವಿಮೆದಾರನು, ವಿಮಾ ನೀತಿಯ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿದ್ದು, ಸಿಂಧುವಾದ ಚಾಲನಾ ಲೈಸೆನ್ಸ್ ಇಲ್ಲದೆ ಅಪಘಾತ ಸಮಯದಲ್ಲಿ ಸವಾರಿ ಮಾಡುತ್ತಿದ್ದನೆಂದು ಆಪಾದಿಸಲಾಗಿತ್ತು.

3. ಪಕ್ಷಕಾರರ ವಾದಗಳ ತಳಹದಿಯಲ್ಲಿ, ಮೋಟಾರು ಅಪಘಾತಗಳ ಕ್ಲೇಮು ನ್ಯಾಯಾಧಿಕರಣವು, ಈ ಮುಂದಿನ ವಿವಾದಾಂಶಗಳನ್ನು ರೂಪಿಸಿದೆ:

(i) ನೋಂದಣಿ ಸಂಖ್ಯೆ.ಕೆಎ–14/ಡಬ್ಲ್ಯೂ–8664 ನ್ನು ಹೊಂದಿರುವ 1ನೇ ಎದುರುದಾರನು ಮೋಟಾರು ವಾಹನವನ್ನು ಅತ್ಯಾತುರ ಮತ್ತು ನಿರ್ಲಕ್ಷ್ಯದಿಂದ ಚಾಲನೆ ಮಾಡಿದ ಕಾರಣದಿಂದ ಸಂಬಂಧಪಟ್ಟ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಅಪಘಾತ ನಡೆಯಿತೆಂಬುದನ್ನು ಅರ್ಜಿದಾರನು ಸಾಬೀತುಪಡಿಸಿರುತ್ತಾನೆಯೇ?

(ii) ಅಪಘಾತದಲ್ಲಿ ಅವನಿಗೆ ಗಾಯಗಳಾಗಿವೆಯೆಂಬುದನ್ನು ಅರ್ಜಿದಾರನು ರುಜುವಾತುಪಡಿಸಿರುತ್ತಾನೆಯೇ?

(iii) 3ನೇ ಎದುರುದಾರನು ಅಪಘಾತ ನಡೆದ ದಿನಾಂಕದಂದು ಚಾಲಕನು ಸಿಂಧುವಾದ ಚಾಲನಾ ಲೈಸೆನ್ಸ್‌ನ್ನು ಹೊಂದಿರಲಿಲ್ಲವೆಂಬುದನ್ನು ರುಜುವಾತುಪಡಿಸಿರುತ್ತಾನೆಯೇ?

(iv) ಅರ್ಜಿದಾರನ ನಿರ್ಲಕ್ಷ್ಯದ ಕಾರಣದಿಂದ ಅಪಘಾತವಾಗಿದೆ ಯೆಂಬುದನ್ನು 3ನೇ ಎದುರುದಾರನು, ರುಜುವಾತುಪಡಿಸಿರುವನೇ?

(v) ಅರ್ಜಿದಾರನು ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗಿರುತ್ತಾನೆಯೇ? ಹಾಗಿದ್ದರೆ ಎಷ್ಟು ಮೊತ್ತಕ್ಕೆ ಮತ್ತು ಯಾರಿಂದ ಪಡೆದುಕೊಳ್ಳಲು ಹಕ್ಕುಳ್ಳವನಾಗುವನು?

(vi) ಐತೀರ್ಪು ಅಥವಾ ಆದೇಶ ಯಾವುದು?

4. ಕ್ಲೇಮುದಾರ/ಗಾಯಾಳುವನ್ನು ಪ್ರಾಸಾ.1 ಎಂದು ಮತ್ತು ವೈದ್ಯರನ್ನು ಪ್ರಾಸಾ.2 ಎಂದು ಪರೀಕ್ಷಿಸಲಾಗಿತ್ತು ಮತ್ತು 46 ದಸ್ತಾವೇಜುಗಳನ್ನು ಸಾಕ್ಷ್ಯದಲ್ಲಿ ಹಾಜರುಪಡಿಸಲಾಗಿತ್ತು ಮತ್ತು ನಿಶಾನೆ ಪಿ.1 ರಿಂದ ಪಿ.46ರ ಎಂದು ಗುರುತು ಮಾಡಲಾಗಿತ್ತು. ಅಪೀಲುದಾರ/ವಿಮಾಗಾರನ ಪರವಾಗಿ ಅದರ ಅಧಿಕಾರಿಯನ್ನು ಎದುರುದಾರ ಸಾಕ್ಷ್ಯ 1 ಎಂದು ಪರೀಕ್ಷಿಸುವಾಗ ಮತ್ತು ನಿಶಾನೆ ಆರ್.1 ರಿಂದ ಆರ್.3ರವರೆಗೆ ಮೂರು ದಸ್ತಾವೇಜುಗಳನ್ನು ಗುರುತು ಮಾಡಲಾಗಿತ್ತು. ಮೋಟಾರು ಅಪಘಾತಗಳ ಕ್ಲೇಮು ನ್ಯಾಯಾಧಿಕರಣವು ಈ ಮುಂದಿನ ನಿರ್ಣಯಗಳನ್ನು ಸಲ್ಲಿಸಲಾಗಿದೆ.

| | |
|---|---|
| ವಿವಾದಾಂಶ ಸಂ.1: | ಭಾಗಶಃ ಸಕಾರಾತ್ಮಕವಾಗಿ |
| ವಿವಾದಾಂಶ ಸಂ.2: | ಸಕಾರಾತ್ಮಕವಾಗಿ |
| ವಿವಾದಾಂಶ ಸಂ.3: | ನಕಾರಾತ್ಮಕವಾಗಿ |
| ವಿವಾದಾಂಶ ಸಂ.4: | ಸಕಾರಾತ್ಮಕವಾಗಿ |
| ವಿವಾದಾಂಶ ಸಂ.5: | ಭಾಗಶಃ ಸಕಾರಾತ್ಮಕವಾಗಿ |
| ವಿವಾದಾಂಶ ಸಂ.6: | ಅಂತಿಮ ಆದೇಶದ ಪ್ರಕಾರ. |

5. ಮೋಟಾರು ಅಪಘಾತಗಳ ಕ್ಲೇಮು ನ್ಯಾಯಾಧಿಕರಣವು, ದಾಖಲೆಯಲ್ಲಿರುವ ಮತ್ತು ಸಾಕ್ಷ್ಯದಲ್ಲಿರುವ ಮೌಖಿಕ ಮತ್ತು ದಸ್ತಾವೇಜಿಯ ಸಾಕ್ಷ್ಯಗಳೆರಡನ್ನು ಗಮನದಲ್ಲಿಟ್ಟುಕೊಂಡು, ಮೋಟಾರು ಸೈಕಲನ್ನು ನಡೆಸುತ್ತಿರುವ ಮಾಲೀಕ/ವಿಮೆದಾರನಾಗಿರುವಾಗ, ಮೋಟಾರು ಸೈಕಲ್‌ನ ಚಾಲಕನು ಹಬೀಬುಲ್ಲಾ ಖಾನ್ (ಮೊ.ವಾ.ಅ.ಕ್ಲೇ.ನ್ಯಾ.ದ ಮುಂದೆ 1ನೇ ಎದುರುದಾರ) ಆಗಿರಲಿಲ್ಲ ಮತ್ತು ಮಾಲೀಕ/ಸವಾರನ ವ್ಯಾಜ್ಯ ಯೋಗ್ಯ ನಿರ್ಲಕ್ಷತೆಯನ್ನು ಆರೋಪಿಸಿ ವಿವಾದಾಂಶ ಸಂ.1ಕ್ಕೆ ಭಾಗಶಃ ಸಕಾರಾತ್ಮಕವಾಗಿ ಉತ್ತರ ನೀಡಿದೆಯೆಂದು ಅಭಿಪ್ರಾಯಪಟ್ಟಿದೆ. ಮೋ.ಅ.ಕ್ಲೇ.ನ್ಯಾ.ವು ಮೋಟಾರು ಸೈಕಲ್‌ನ ಸವಾರನು ಅವನೇ ಆಗಿದ್ದನು ಎನ್ನುವುದು ಮಾಲೀಕನ/ವಿಮಾಗಾರನ ತಪ್ಪು ತೊಡಕಿನ ಆಪಾದನೆಯಾಗಿದೆಯೆಂದು ಹೇಳುವ ಆಧಾರದ ಮೇಲೆ ಅಪೀಲುದಾರನಿಗೆ ನಷ್ಟಪರಿಹಾರವನ್ನು ಸಂದಾಯ ಮಾಡುವ

ಹೊಣೆಗಾರಿಕೆಯನ್ನು ದೃಢಪಡಿಸುವಾಗ, ಆಪಾದಿತ ಮೋಟಾರು ವಾಹನದ ಮಾಲೀಕ/ವಿಮಾಗಾರನು ನೀತಿಯ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿರುವುದನ್ನು ರುಜುವಾತುಪಡಿಸಲು ವಿಫಲವಾಗಿದ್ದಕ್ಕಾಗಿ ಅಪೀಲುದಾರನ ಆಪಾದನೆಯನ್ನು ನಿರಾಕರಿಸುವಾಗ ಪ್ರಶ್ನಿತ ತೀರ್ಪು ಮತ್ತು ಐತೀರ್ಪಿನ ಮೂಲಕ ನಷ್ಟಪರಿಹಾರವನ್ನು ಸಂದಾಯ ಮಾಡುವ ಹೊಣೆಗಾರಿಕೆಯಿಂದ ಅಪೀಲುದಾರನನ್ನು ವಿಮುಕ್ತಿಗೊಳಿಸುವ ಯಾವುದೇ ಹೆಚ್ಚಿನ ಆಧಾರವಿರುವುದಿಲ್ಲವೆಂದು ಪ್ರತೀ ವರ್ಷಕ್ಕೆ ಶೇಕಡಾ 6ರ ದರದ ಬಡ್ಡಿಯೊಂದಿಗೆ ನಷ್ಟ ಪರಿಹಾರವಾಗಿ 93,500/– ರೂ.ಗಳನ್ನು ನೀಡಿದೆ.

6. ಅಪೀಲುದಾರ/ವಿಮಾಗಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಈ ಮುಂದಿನ ನಿವೇದನೆಗಳನ್ನು ಮುಂದಿಟ್ಟಿರುತ್ತಾರೆ:

(i) ಮೋಟಾರು ವಾಹನಗಳ ಅಪಘಾತ ಕ್ಲೇಮು ನ್ಯಾಯಾಧಿಕರಣವು, ಮೋಟಾರು ಸೈಕಲ್ಲನ್ನು ಮಾಲೀಕ/ವಿಮಾಗಾರನು ಚಾಲನೆ ಮಾಡುತ್ತಿದ್ದು, ಅವನ ನಿರ್ಲಕ್ಷ್ಯದ ಕೃತ್ಯದಿಂದ ಅಪಘಾತವಾಗಿದೆ ಮತ್ತು; ಹಬೀಬುಲ್ಲಾ ಖಾನನು ಸವಾರನಾಗಿರಲಿಲ್ಲ ಹಾಗೆಯೇ ಸಂಜ್ಞೇಯ ಅಪರಾಧ ನಡೆದಿರುವ ಸಂಬಂಧ ಕ್ರಿಮಿನಲ್ ವ್ಯವಹರಣೆಗಳಲ್ಲಿ, ಹಬೀಬುಲ್ಲಾ ಖಾನನು ಪ್ರಶ್ನಿತ ಮೋಟಾರು ಸೈಕಲ್‌ನ ಅತ್ಯಾತುರ ಮತ್ತು ನಿರ್ಲಕ್ಷ್ಯತನದ ತಪ್ಪಿತಸ್ಥನೆಂದು ವಾದಿಸಿದೆಯೆಂದು ಅಭಿಪ್ರಾಯಪಟ್ಟಿದೆ.

(ii) ವಿಮಾಗಾರನ ಅಧಿಕಾರಿ, ಎದುರುದಾರ ಸಾ.1ರ ಸಾಕ್ಷ್ಯವು, ಮೆಡಿಕೊ ಲೀಗಲ್ ಕೇಸ್ ರಿಜಿಸ್ಟರುಗಳು, ನಿಶಾನೆ ಆರ್.1 ಮತ್ತು ಆರ್.2 ಆಗಿದ್ದು, ಇವು, ಮೋಟಾರು ವಾಹನಗಳ ಅಪಘಾತದಲ್ಲಿ ಕ್ಲೇಮುದಾರ ಮತ್ತು ಮಾಲೀಕ/ವಿಮಾಗಾರನಿಗೆ ಆದ ಗಾಯಗಳನ್ನು ದಾಖಲಿಸಿವೆ;

(iii) ಮೋಟಾರು ಸೈಕಲ್ ಸವಾರನ ಸಾಕ್ಷ್ಯ ವಿವರಗಳನ್ನು ಒದಗಿಸಲು ವಿಮಾಗಾರನು ಹೊರಡಿಸಿದ ನೋಟೀಸಿನ ವಿಮೆದಾರನು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ ಮತ್ತು ಮೊ.ಅ.ಕ್ಲೇ.ನ್ಯಾ.ದ ಮುಂದೆ ಏಕಪಕ್ಷೀಯವಾಗಿ ಮಂಡಿಸಲಾಗಿತ್ತು;

7. ಮಾನ್ಯ ವಕೀಲರ ಪ್ರಕಾರ, ಹಿಂದೆ ಹೇಳಲಾದ ಸಂಗತಿಗಳಿಗೆ ವಿರುದ್ಧವಾಗಿ ಮಾಲೀಕ/ವಿಮೆದಾರನು ಮೋಟಾರು ಸೈಕಲ್‌ನ್ನು ನಡೆಸಲು ಸಿಂಧುವಾದ ಮತ್ತು ಪರಿಣಾಮಕಾರಿಯಾದ ಚಾಲನಾ ಲೈಸೆನ್ಸ್‌ನ್ನು ಹೊಂದಿಲ್ಲದಿದ್ದು ಅಪಘಾತ ನಡೆದಿರುವುದರಿಂದ ಹಬೀಬುಲ್ಲಾ ಮತ್ತು ಪೊಲೀಸರು ಒಳಸಂಚು ನಡೆಸಿದ್ದು, ಸದರಿ ಹಬೀಬುಲ್ಲಾನನ್ನು ಸವಾರನೆನ್ನುವುದನ್ನು ತಳುಕು ಹಾಕಿದ್ದು, ವಿಮಾಗಾರನಿಗೆ ಮೋಸ ಮಾಡಿದ್ದು, ಇದರಿಂದ ಕಂಪನಿಯ ನೀತಿಯ ನಿಬಂಧನೆ ಮತ್ತು ಷರತ್ತುಗಳ ಉಲ್ಲಂಘನೆಯಾಗಿದೆ, ಇದರಿಂದ ಕಂಪನಿಯ ಪಾಲಿಸಿಯ ಮೇರೆಗಿನ ನಷ್ಟಭರ್ತಿಗೆ ಹಕ್ಕುಳ್ಳವರಾಗಿರುವುದಿಲ್ಲ ಮತ್ತು ಇದರ ಪರಿಣಾಮವಾಗಿ ಅಪೀಲುದಾರನು ನಷ್ಟಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾಗುವುದಿಲ್ಲವೆಂದಿದ್ದಾರೆ.

8. ಮೋಟಾರು ವಾಹನವನ್ನು ಚಾಲನೆ ಮಾಡುತ್ತಿದ್ದ 2ನೇ ಎದುರುದಾರ/ ಮಾಲೀಕನು ಅಪಘಾತಕ್ಕೆ ಕಾರಣನಾಗಿರುವವನು ಮತ್ತು ಮೊದಲ ಎದುರುದಾರ/ ಹಬೀಬುಲ್ಲಾ ಖಾನನು ವಾಹನಗಳ ಅಪಘಾತ ಕ್ಲೇಮು ನ್ಯಾಯಾಧಿಕರಣದ ಮುಂದಿದ್ದ ವ್ಯವಹರಣೆಯನ್ನು ನಿರರ್ಥಕಗೊಳಿಸಿ ಮೋಸ ಮಾಡಿರುವವನಲ್ಲ ಎಂಬ ವಿವಾದಾಂಶ ಸಂ.1ರ ನಿರ್ಣಯದೊಂದಿಗೆ ಸೇರಿಸಿದ ಕ್ಲೇಮನ್ನು ಪ್ರತಿರೋಧಿಸಿಲ್ಲದ ಮಾಲೀಕ/ ವಿಮಾ ಕರ್ತನಿಗೆ ಕ್ಲೇಮುದಾರ/ಗಾಯಾಳು ಡಿಕ್ಕಿ ಹೊಡೆದಿರುವನೆಂಬ ವಾದದ ಸಮರ್ಥನೆಯಲ್ಲಿ, ಮಾನ್ಯ ವಕೀಲರು ***ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ– ರಾಜೇಶ್ ಸಿಂಗ್ ಮತ್ತು ಇತರರು*** [1] ಮತ್ತು ***ನ್ಯಾಷನಲ್ ಇನ್‌ಶೂರೆನ್ಸ್ ಕಂಪನಿ ನಿಯಮಿತ –ವಿರುದ್ಧ– ನಿಕೊಲೆಟ್ಟ ರೋಹಟಗಿ ಮತ್ತು ಇತರರು***[2] ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಆಧರಿಸಿ ಮಂಡಿಸಿದ್ದಾರೆ.

1. ಎಐಆರ್ 2000 ಎಸ್‌ಸಿ 1165 2. ಎಐಆರ್ 2002 ಎಸ್‌ಸಿ 3350

9. ಕರಾರು ಅಧಿನಿಯಮದ ಮೇರೆಗೆ ನಷ್ಟಭರ್ತಿಯ ನಿಬಂಧನೆಗಳು ಮತ್ತು ಷರತ್ತುಗಳ ಉಲ್ಲಂಘನೆಗಾಗಿ ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಮಾಲೀಕ/ವಿಮಾ ಕರ್ತನಿಗೆ ಪ್ರತಿಯಾಗಿ, ವಿಮಾಗಾರ/ಅಪೀಲುದಾರನು ಕೋರುವುದಕ್ಕೆ ಹಕ್ಕುಳ್ಳವನಾಗಿರುವುದಿಲ್ಲವೆಂದು ನಿವೇದಿಸಲು ಅನುಕ್ರಮವಾಗಿ ಕ್ಲೇಮುಗಳ ನ್ಯಾಯಾಧಿಕರಣದ ರಚನೆ ಮತ್ತು ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಪ್ರತಿಷೇಧಕ್ಕೆ ಸಂಬಂಧಪಟ್ಟಂತೆ, 'ಅಧಿನಿಯಮ'ದ 165 ಮತ್ತು 175ನೇ ಪ್ರಕರಣಗಳನ್ನು ಮಾನ್ಯ ವಕೀಲರು ಎತ್ತಿ ತೋರಿಸಿದ್ದಾರೆ.

10. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವನ್ನು ಆಲಿಸಿ, ವಾದಗಳನ್ನು ಅವಗಾಹಿಸಿದ್ದು, ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯಗಳೆರಡನ್ನು, ತೀರ್ಪು ಮತ್ತು ಐತೀರ್ಪನ್ನು ಪರಿಶೀಲಿಸಲಾಗಿದ್ದು, ನಿರ್ಣಯ ಕೈಗೊಳ್ಳುವುದಕ್ಕೆ ಇರುವ ಒಂದೇ ಒಂದು ಪ್ರಶ್ನೆ ಎಂದರೆ:

> "ದಾಖಲೆಯಲ್ಲಿರುವ ಸಂಗತಿಗಳು, ಸನ್ನಿವೇಶಗಳು ಮತ್ತು ಸಾಕ್ಷ್ಯದಲ್ಲಿ, ಮೋಟಾರು ವಾಹನಗಳ ಅಪಘಾತ ಕ್ಲೇಮು ನ್ಯಾಯಾಧಿಕರಣವು, ನಷ್ಟಪರಿಹಾರವನ್ನು ಸಂದಾಯ ಮಾಡಲು ಅಪೀಲುದಾರ/ವಿಮಾಗಾರನಿಗೆ ಹೊರಿಸಿರುವುದು ನ್ಯಾಯಸಮ್ಮತವಾಗಿದೆಯೇ?"

11. ಕ್ಲೇಮು ಅರ್ಜಿಯಲ್ಲಿ, ಮಾಲೀಕ ವಿಮಾಗಾರನು ಎರಡನೇ ಎದುರುದಾರನಾಗಿದ್ದಾಗ ಮೋಟಾರು ಸೈಕಲ್‌ನ ಸವಾರನು ಹಬೀಬುಲ್ಲಾ ಖಾನ್ ಆಗಿದ್ದನು ಎಂಬುದನ್ನು ದೃಢಪಡಿಸಿದ್ದನು ಮತ್ತು ವಿಮಾಗಾರನು ಸದರಿ ಮೋಟಾರು ಸೈಕಲ್‌ನ 3ನೇ ಎದುರುದಾರ/ಅಪೀಲುದಾರನಾಗಿದ್ದನು ಎಂಬುದರಲ್ಲಿ ಯಾವುದೇ ವಿವಾದವಿಲ್ಲ. ಅಪೀಲುದಾರ/ವಿಮಾಗಾರನ ಆಕ್ಷೇಪಣೆಗಳ ವಿವರಣೆಯಲ್ಲಿ, 2ನೇ ಎದುರುದಾರ/ಮಾಲೀಕ ವಿಮಾಕರ್ತನು, ವಿಮೆಯ ಪಾಲಿಸಿಯ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ಸಿಂಧುವಾದ ಚಾಲನಾ ಲೈಸೆನ್ಸ್ ಇಲ್ಲದೆಯೇ ಮೋಟಾರು ಸೈಕಲ್‌ನ್ನು ನಡೆಸುತ್ತಿದ್ದು, ಅಪಘಾತಕ್ಕೆ ಕಾರಣನಾಗಿದ್ದರೂ ಕೂಡ, ಕ್ಲೇಮು ಅರ್ಜಿಯಲ್ಲಿ ಆಪಾದಿಸಲಾದ ಹಬೀಬುಲ್ಲಾ ಖಾನನು ಆಪಾದಿಸಲಾದ

ಇತರ ಎದುರುದಾರರೊಂದಿಗೆ ಡಿಕ್ಕಿ ಹೊಡೆದ ಮಾಲೀಕ ವಿಮಾಗಾರ/2ನೇ ಎದುರುದಾರ ಮತ್ತು ಪೊಲೀಸು ಅಧಿಕಾರಿಗಳು, ಹಬೀಬುಲ್ಲಾ ಖಾನನೆಂದು ಸವಾರನ ಹೆಸರನ್ನು ಬದಲಾಯಿಸುವ ಮೂಲಕ ಸುಳ್ಳು ಮೊಕದ್ದಮೆಯನ್ನು ದಾಖಲಿಸಿರುವರೆಂದು ವಾದಿಸಿದ್ದಾರೆ.

12. ಪ್ರಾಸಾ.1, ಕ್ಲೇಮುದಾರನು ಪಾಟೀ–ಸವಾಲಿನಲ್ಲಿ, ಮಾಲೀಕ/ವಿಮಾಕರ್ತನು ಅಪಘಾತವಾದ ಸಮಯದಲ್ಲಿ ಮತ್ತು ದಿನಾಂಕದಲ್ಲಿ ಆಪಾದಿಸಲಾದ ಮೋಟಾರು ಸೈಕಲ್ಲನ್ನು ನಡೆಸುತ್ತಿದ್ದನೆಂದು ಪ್ರಕಟಪಡಿಸಿದ್ದಾನೆ. ಒಪ್ಪಿಗೆಯ ಈ ಕಾರಣದಿಂದಾಗಿ, ವ್ಯಾಜ್ಯ ಯೋಗ್ಯ ನಿರ್ಲಕ್ಷ್ಯತನವನ್ನು ಆರೋಪಿಸಿ ವಿವಾದಾಂಶ ಸಂ.1ಕ್ಕೆ ಉತ್ತರಿಸಲು 2ನೇ ಎದುರುದಾರ ಮಾಲೀಕ/ವಿಮಾಕರ್ತನು ಮೋಟಾರು ಸೈಕಲ್ ಸವಾರನಾಗಿದ್ದು, ಅವನ ನಿರ್ಲಕ್ಷ್ಯತನದ ಕಾರಣದಿಂದ ಅಪಘಾತಕ್ಕೆ ಕಾರಣವಾಗಿದೆಯೆಂದು ನಿರ್ಣಯವನ್ನು ದಾಖಲಿಸುವ ಮೂಲಕ ಮೋಟಾರು ವಾಹನಗಳ ಅಪಘಾತ ಕ್ಲೇಮು ನ್ಯಾಯಾಧಿಕರಣವು ನ್ಯಾಯಸಮ್ಮತವಾಗಿದೆ. ಹಬೀಬುಲ್ಲಾ ಖಾನನು, ದುರ್ದೈವದ ದಿನದಂದು ಮೋಟಾರು ಸೈಕಲ್ಲಿನ ಸವಾರನಾಗಿರಲಿಲ್ಲವೆಂದು ಅಭಿಪ್ರಾಯಪಡುವ ಮೂಲಕ ಮೋಟಾರು ಅಪಘಾತಗಳ ಕ್ಲೇಮುಗಳ ನ್ಯಾಯಾಧಿಕರಣವು ಸಮರ್ಥಿಸಿಕೊಂಡಿತ್ತು.

13. ಭಾರತೀಯ ದಂಡ ಸಂಹಿತೆಯ ಮೇರೆಗೆ ಸಂಜ್ಞೇಯವಾದ ಅಪರಾಧಗಳನ್ನು ಆಪಾದಿತನು ನಡೆಸಿರುವಾಗ ಹಬೀಬುಲ್ಲಾ ಖಾನ್/1ನೇ ಎದುರುದಾರನು ಕ್ರಿಮಿನಲ್ ನ್ಯಾಯಾಲಯದ ಮುಂದೆ ತಾನು ತಪ್ಪಿತಸ್ಥನೆಂದು ಒಪ್ಪಿಕೊಂಡಿದ್ದಾನೆ. ಪ್ರಥಮ ಮಾಹಿತಿ ವರದಿ, ನಿಶಾನೆ ಪಿ.2ರಲ್ಲಿ ಸವಾರನೆಂಬ ಹೆಸರನ್ನು ಸೂಚಿಸಿಲ್ಲದಿರುವುದರಿಂದ ಹಬೀಬುಲ್ಲಾ ಖಾನನು ಮೋಟಾರು ಸೈಕಲ್‌ನ ಸವಾರನಾಗಿರುವುದರಲ್ಲಿ ತಳಕು ಹಾಕಿದ್ದರೆ ಆಗ, ಕ್ರಿಮಿನಲ್ ನ್ಯಾಯಾಲಯವು ಪರಿಗಣಿಸುವುದಕ್ಕೆ ಸಂಬಂಧಪಡುತ್ತದೆ ಮತ್ತು ಎದುರುದಾರರು ಶಾಮೀಲಾಗಿರುವುದನ್ನು ಒಪ್ಪಿಕೊಂಡು ನಷ್ಟ ಪರಿಹಾರಕ್ಕಾಗಿ ವ್ಯವಹರಣೆಯಲ್ಲಿ ಯಾವುದೆ ಪ್ರಮುಖ ಪ್ರಭಾವವನ್ನು ತೀವ್ರವಾಗಿ ಬೀರಬಹುದು.

14. ಎರಡನೇ ಎದುರುದಾರ, ಮಾಲೀಕ/ವಿಮಾಕರ್ತನು ಗಾಯಗೊಂಡಿದ್ದು, ಕ್ಲೇಮುದಾರನಾಗಿ ಅದೇ ದಿನ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು

ತೆಗೆದುಕೊಂಡಿರಬಹುದು. ಆದರೆ, ನಿಶಾನೆ ಆರ್.1 ಮತ್ತು ಆರ್.2 ಇದರ ಕರ್ತೃವಿನ ಸಾಕ್ಷ್ಯ, ಎಂಎಲ್‌ಸಿ ಉದ್ಧೃತಗಳು ಪ್ರಾಸಾ.1 ಅಪೀಲುದಾರನ ಅಧಿಕಾರಿಯ ಮೌಖಿಕ ಸಾಕ್ಷ್ಯಗಳು, ಸದರಿ ನಿಶಾನೆಗಳ ಅಂಶಗಳನ್ನು ರುಜುವಾತುಪಡಿಸುವ ದಿಕ್ಕಿನಲ್ಲಿಲ್ಲ.

15. ಮೇಲಿನ ಸಂಗತಿಗಳು, ಸನ್ನಿವೇಶಗಳು ಮತ್ತು ಸಾಕ್ಷ್ಯವು, 1ನೇ ಎದುರುದಾರ ಹಬೀಬುಲ್ಲಾ ಖಾನನು, ಎರಡನೇ ಎದುರುದಾರ/ಮಾಲೀಕ/ವಿಮಾಕರ್ತ ಮತ್ತು ಪೊಲೀಸು ಪ್ರಾಧಿಕಾರಿಗಳೊಂದಿಗೆ ಶಾಮೀಲಾಗಿ, ವಿಮಾ ಪಾಲಿಸಿಯಲ್ಲಿರುವ ನಷ್ಟಭರ್ತಿಯ ಖಂಡವನ್ನು ಅನುಸರಿಸುವ ಮೂಲಕ ಅಪೀಲುದಾರನಿಂದ ನಷ್ಟಪರಿಹಾರವನ್ನು ಪಡೆದುಕೊಳ್ಳಲು ಕ್ಲೇಮುದಾರನನ್ನು ಶಕ್ತಗೊಳಿಸುವ ಮೂಲಕ ಕಾನೂನು ಬಾಹಿರ ಲಾಭವನ್ನು ಮಾಡಿಕೊಳ್ಳಲು ಶಾಮೀಲಾಗಿರುವರು ಎಂಬ ಆಪಾದನೆಯನ್ನು ರುಜುವಾತುಪಡಿಸಿಲ್ಲ.

16. ಪ್ರತ್ಯರ್ಜಿದಾರ ಸಾಕ್ಷ್ಯ.1ರ ಸಾಕ್ಷ್ಯವು ಮಾಲೀಕ/ವಿಮಾಕರ್ತನು ಅಪಘಾತದ ದಿನಾಂಕ ಮತ್ತು ಸಮಯದಲ್ಲಿ ಮೋಟಾರು ಸೈಕಲ್ಲನ್ನು ನಡೆಸಲು ಸಿಂಧುವಾದ ಮತ್ತು ಪರಿಣಾಮಕಾರಿ ಚಾಲನಾ ಲೆಸೆನ್ಸ್‌ನ್ನು ಹೊಂದಿರಲಿಲ್ಲ ಎನ್ನುವ ಆಪಾದನೆಯನ್ನು ಸಾಬೀತುಪಡಿಸುವ ದಿಕ್ಕಿನಲ್ಲಿರಲಿಲ್ಲ. ಅಪೀಲುದಾರ/ಪ್ರತ್ಯರ್ಜಿದಾರ ಸಾಕ್ಷ್ಯ.1 ಇನ್ಸುರೆನ್ಸ್ ಕಂಪೆನಿಯ ಅಧಿಕಾರಿಯ ಸಾಕ್ಷ್ಯವು, ಅಪಘಾತ ನಡೆದ ದಿನಾಂಕ ಮತ್ತು ಸಮಯದಂದು ಸಿಂಧುವಾದ ಮತ್ತು ಪರಿಣಾಮಕಾರಿಯಾದ ಚಾಲನಾ ಲೈಸೆನ್ಸ್‌ನ್ನು ಮಾಲೀಕ/ವಿಮಾಕರ್ತನು ಹೊಂದಿದ್ದನೋ ಅಥವಾ ಇಲ್ಲವೇ ಎಂಬುದರ ಬಗ್ಗೆ ಸ್ವಂತ ಅರಿವನ್ನು ಹೊಂದಿರಲಿಲ್ಲ. ರಸ್ತೆ ಸಾರಿಗೆ ಇಲಾಖೆಯ ಅಧಿಕಾರಿಗಳ ಸಾಕ್ಷ್ಯ ಅಥವಾ ಯಾವುದೇ ಇತರ ಗಣನೀಯ ಕಾನೂನು ಸಾಕ್ಷ್ಯ ಇಲ್ಲದಿರುವಾಗ ಮೋ.ವಾ.ಅ.ಕ್ಲೇ.ನ್ಯಾಯಾಲಯವು, ಮೋಟಾರು ಸೈಕಲ್‌ನ ಸವಾರನ ಮುಖ್ಯ ವಿವರಗಳನ್ನು ಒದಗಿಸಲು ಮಾಲೀಕ/ವಿಮಾಕರ್ತನನ್ನು ಕೋರಿರುವ ಆಪಾದಿತ ನೋಟೀಸಿಗೆ ಪ್ರತಿಕ್ರಿಯಿಸದಿರುವ ಸಂಬಂಧ ಮಾಲೀಕ/ವಿಮಾಕರ್ತನ ಹಿತಾಸಕ್ತಿಗೆ ಪ್ರತಿಕೂಲ ಅನುಮಾನವನ್ನು ಸಮರ್ಥನೀಯವಾಗಿ ರೂಪಿಸಿರಲಿಲ್ಲ. 1 ಮತ್ತು 2ನೇ ಎದುರುದಾರರು, ಮೋಟಾರು ವಾಹನದ ಚಾಲಕನ ಮುಖ್ಯ ವಿವರಗಳು, ಹಾಗೆಯೇ ಚಾಲನಾ ಲೈಸೆನ್ಸಿಗೆ ಸಂಬಂಧಪಟ್ಟವುಗಳನ್ನು ಒದಗಿಸಲು ಮೋ.ವಾ.ಅ.ಕ್ಲೇ.ನ್ಯಾ.

ಮುಂದೆ ಅಪೀಲುದಾರನು ಸಲ್ಲಿಸಿದ ವಾದ ಕಾಲೀನ ಅರ್ಜಿ (ಐಎ) ಸಂಬಂಧ ನೋಟೀಸಿಗೆ ತಂತಾನೇ ಪ್ರತಿಕ್ರಿಯಿಸಿದಿರುವುದಿಲ್ಲ. ಅಷ್ಟೇ ಹೊರತು ಬೇರೇನಿಲ್ಲ, ಮಾಲೀಕ/ವಿಮಾಕರ್ತನು ಅಪಘಾತ ನಡೆದ ದಿನಾಂಕ ಮತ್ತು ಸಮಯದಂದು ಮೋಟಾರು ಸೈಕಲ್ಲನ್ನು ನಡೆಸಲು ಸಿಂಧುವಾದ ಮತ್ತು ಪರಿಣಾಮಕಾರಿಯಾದ ಚಾಲನಾ ಲೈಸೆನ್ಸ್‌ನ್ನು ಹೊಂದಿರಲಿಲ್ಲವೆನ್ನುವ ಪ್ರತಿಕೂಲ ಅನುಮಾನ ಹೊಂದಿರಲೇಬೇಕು ಎಂದು ಹೇಳಲು ಸಾಧ್ಯವಿಲ್ಲ. ರುಜುವಾತಾದ ಸಂಗತಿಗಳು ತೀರ್ಮಾನವನ್ನು ಸಮರ್ಥಿಸಿದ್ದಾಗ, ಅವಶ್ಯಕತೆಗಳನ್ನು ಊಹಿಸಬಹುದಾಗಿದೆಯೆಂದು ಬೇರೆ ಕಡೆ ಹೇಳಲಾಗಿದೆ. ಒಂದು ಕಡೆ, ಊಹೆ ಮಾಡಲು, ಅನುಮಾನಿಸಲು ಅಥವಾ ಸಂಶಯಪಡಲು ಆಗುವುದೇ ಇಲ್ಲ, ಮತ್ತೊಂದು ಕಡೆ, ತೀರ್ಮಾನ ಕಾನೂನು ಸಮ್ಮತವಾಗಿರುವವರೆಗೂ ರುಜುವಾತಾದ ಸಂಗತಿಗಳಿಂದ ತೀರ್ಮಾನಿಸಬಹುದು.

17. ವೈದ್ಯಕೀಯ ಕಾನೂನು ಪ್ರಕರಣದ ರಿಜಿಸ್ಟರುಗಳು, ನಿಶಾನೆ ಆರ್.1 ಮತ್ತು 2ರ ನಮೂದುಗಳು ಕರ್ತೃವನ್ನು ಪರಿಶೀಲಿಸುವ ಮೂಲಕ ರುಜುವಾತಾಗದಿದ್ದಾಗ, ಮುಖ್ಯ ವಿವರಗಳನ್ನು ಅಪಹರಿಸುವ ಮೋಸದ ಸಾಮಾನ್ಯ ಆಪಾದನೆಯು ತಂತಾನೆ ರುಜುವಾತಾಗದಿರುವುದರಿಂದ ಪ್ರತ್ಯರ್ಜಿದಾರ ಸಾಕ್ಷ್ಯದ ಮೂಲಕ ತಡೆಯಲಾಗಿದೆ. ಪೊಲೀಸು ಪ್ರಾಧಿಕಾರಿಗಳು, ಅವರು ಆಪಾದಿತ 'ಮೋಸ'ದಲ್ಲಿ ಭಾಗಿಯಾಗಿರಲಿಲ್ಲವೆಂಬ ನಿರ್ಣಯವನ್ನು ದಾಖಲಿಸುವ ಸಲುವಾಗಿ, ಅವರು ಕ್ಲೇಮು ಅರ್ಜಿಗೆ ಪಕ್ಷಕಾರರಾಗಿರುವುದಿಲ್ಲ.

18. ಮೋಸ, ತಪ್ಪಾಗಿ ಅರ್ಥೈಸುವಿಕೆ ಮತ್ತು ಯುಕ್ತವಲ್ಲದ ಪ್ರಭಾವ ಮತ್ತು ಬಲಾತ್ಕಾರ ಸಂದರ್ಭದಲ್ಲಿ ***ಬಿಶುಂಡಿಯಾ ನರ್ೈನ್ ಮತ್ತು ಮತ್ತೊಬ್ಬರು –ವಿರುದ್ಧ– ಸೆಯೋಗೆಣಿ ರೈ ಮತ್ತು ಇತರರು***[3] ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಹೀಗೆ ಅಭಿಪ್ರಾಯಪಟ್ಟಿದೆ:

> "25. ಯಾವುದೇ ಯುಕ್ತ ವಿವರಗಳನ್ನು ಒದಗಿಸಿಲ್ಲವೆಂದು ಕೂಡ ಅಭಿಪ್ರಾಯಪಟ್ಟಿದೆ. ಯಾವುದೇ ಒಂದಕ್ಕಿಂತ ಉತ್ತಮವಾಗಿ

3. ಎಐಆರ್ 1951 ಎಸ್‌ಸಿ 280

> ದೃಢಪಡಿಸಲಾಗಿರುವ ಒಂದು ನಿಯುಮವಿದ್ದರೆ, ಮೋಸದ ಯುಕ್ತವಲ್ಲದ ಪ್ರಭಾವ ಮತ್ತು ಬಲಾತ್ಕಾರದ ಪ್ರಕರಣಗಳಲ್ಲಿ, ಇದನ್ನು ವಾದಿಸಿರುವ ಪಕ್ಷಕಾರರು ಪೂರ್ಣ ವಿವರಗಳನ್ನು ತಿಳಿಸಲೇಬೇಕು ಮತ್ತು ಇಡಲಾದಂಥ ವಿವರಗಳ ಆಧಾರದ ಮೇಲೆ ಮಾತ್ರ ಪ್ರಕರಣವನ್ನು ತೀರ್ಮಾನಿಸಬಹುದು. ಸಾಕ್ಷ್ಯದಲ್ಲಿ ಅದರಿಂದ ಹಿಂದೆ ಸರಿಯಲು ಸಾಧ್ಯವಿರುವುದಿಲ್ಲ. ಯಾವುದೇ ನ್ಯಾಯಾಲಯ ಗಮನಕ್ಕೆ ತೆಗೆದುಕೊಳ್ಳಲೇ ಬೇಕಾಗಿರುವ ಮೋಸದ ದೃಢವಾದ ಹೇಳಿಕೆಗೆ ಕಾರಣವಾಗಿದ್ದರೂ ಕೂಡ ಸಾಮಾನ್ಯ ಆಪಾದನೆಗಳು ಸಾಕಷ್ಟಿರುವುದಿಲ್ಲ. ಆದಾಗ್ಯೂ ಅವುಗಳನ್ನು ಹೇಳಬಹುದಾದ ಭಾಷೆ ಬಲವಾಗಿದ್ದರೂ, ಅದನ್ನು ಯುಕ್ತವಲ್ಲದ ಪ್ರಭಾವ ಮತ್ತು ಬಲಾತ್ಕಾರಕ್ಕೆ ಅನ್ವಯಿಸಬಹುದು. ದಂಡ ಪ್ರಕ್ರಿಯಾ ಸಂಹಿತೆಯ 4ನೇ ನಿಯಮದ ಆದೇಶ ನೋಡಿ"

19. ಸದರಿ ತತ್ವಗಳನ್ನು ***ವರನಸಯ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಇನ್ನೊಬ್ಬರು –ವಿರುದ್ಧ– ಡಾ॥ ರಾಜ್‌ಕಿಶೋರ್ ತ್ರಿಪತಿ ಮತ್ತು ಮತ್ತೊಬ್ಬರು***[4] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ನಂತರದ ನಿರ್ಣಯವನ್ನು ಅನುಸರಿಸಲಾಗಿದೆ. ***ಸುಭಾಸ್ ಚಂದ್ರ ದಾಸ್ ಮುಶಿಬ್ –ವಿರುದ್ಧ– ಗಂಗಾ ಪ್ರಸಾದ್ ದಾಸ್ ಮುಶಿಬ್ ಮತ್ತು ಇತರರು***[5] ಪ್ರಕರಣದಲ್ಲಿ ಯುಕ್ತವಲ್ಲದ ಪ್ರಭಾವದ ವಾದವನ್ನು ಪರಿಶೀಲಿಸುವಾಗ ಹೀಗೆ ಅಭಿಪ್ರಾಯಪಡಲಾಗಿದೆ:

> "10. ಯುಕ್ತವಲ್ಲದ ಪ್ರಭಾವವನ್ನು ಬಳಸಲಾಗಿತ್ತೇ ಅಥವಾ ಇಲ್ಲವೇ ಎಂಬುದನ್ನು ಪರೀಕ್ಷಿಸಲು ನ್ಯಾಯಾಲಯವು ಕೋರಿದ್ದಾಗ್ಯೂ, ಅಂಥ ವಿಷಯವನ್ನು ರೂಪಿಸಲಾಗಿತ್ತು ಎಂಬುದನ್ನು ಮತ್ತು ಯುಕ್ತವಲ್ಲದ ಪ್ರಭಾವದ ಸಂಪೂರ್ಣ ವಿವರಗಳನ್ನು ಮೋಸದ ಸಂದರ್ಭದಲ್ಲಿ ನೀಡಲಾಗಿತ್ತು ಎಂಬುದನ್ನು ಗುರುತಿಸಲು ವಾದಗಳನ್ನು ಪರಿಷ್ಕರಿಸಲೇಬೇಕು. ಸಿವಿಲ್ ಪ್ರಕ್ರಿಯಾ ಸಂಹಿತೆಯ

4. ಎಐಆರ್ 1977 ಎಸ್‌ಸಿ 615

5.ಎಐಆರ್ 1967 ಎಸ್‌ಸಿ 878

4ನೇ ನಿಯಮದ 6ನೇ ಆದೇಶವನ್ನು ನೋಡಿ ವಾದದ ಈ ದೃಷ್ಟಿಕೋನಕ್ಕೆ, ಲಡ್ಲಿ ಪ್ರಸಾದ್ ಜೈಸ್ವಾಲ್ ವಿರುದ್ಧ ದ ಕರ್ನೋಲ್ ಡಿಸ್ಟಿಲರಿ ಕಂಪನಿ ನಿಯಮಿತ, ಕರ್ನೂಲು ಮತ್ತು ಇತರರು (ಎಐಆರ್ 1963 ಎಸ್‌ಸಿ 1279: (1963/33), ಮೊಕದ್ದಮೆಗಳ ಸಂಯೋಜನೆ.593 (ಸರ್ವೋ.ನ್ಯಾ) ಮೇಲೆ ಉಲ್ಲೇಖಿಸಲಾದ ಪ್ರಕರಣದಲ್ಲಿ ಹೆಚ್ಚು ಒತ್ತು ನೀಡಲಾಗಿದೆ. ಆ ಪ್ರಕರಣದಲ್ಲಿ, (ಪುಟ 295ರಲ್ಲಿ) (ಎಸ್‌ಸಿಆರ್‌ನ): (ಎಐಆರ್‌ನ 288ನೇ ಪುಟದಲ್ಲಿ ಹೀಗೆ ಅಭಿಪ್ರಾಯಪಡಲಾಗಿತ್ತು":

"ಅಸ್ಪಷ್ಟ ಅಥವಾ ಸಾಮಾನ್ಯ ವಾದವು ಎಂದೂ ಈ ಉದ್ದೇಶವನ್ನು ಈಡೇರಿಸಲಾರದು; ವಾದಿಸುವ ಪಕ್ಷಕಾರನು, ಚಲಾಯಿಸಲಾದ ಪ್ರಭಾವದ ಖಚಿತ ಸ್ವರೂಪವನ್ನು ವಾದಿಸಬೇಕಾಗುತ್ತದೆ. ಆದುದರಿಂದ ಪ್ರಭಾವಕ್ಕೆ ಮತ್ತು ಸರಿಯಿಲ್ಲದ ಅನುಕೂಲವನ್ನು ಬಳಸಿಕೊಂಡ ರೀತಿಯನ್ನು ಮತ್ತೊಬ್ಬರಿಂದ ಪಡೆದುಕೊಳ್ಳಬೇಕು."

20. ಮೋಸದ ಆಪಾದನೆಗೆ ಸಂಬಂಧಪಟ್ಟಂತೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 6ನೇ ನಿಯಮದ ಆದೇಶದ ಸಂಗತಿಯನ್ನು ಪರಿಗಣಿಸಿ ***ಅಫ್ಸರ್ ಶೇಕ್ ಮತ್ತು ಇನ್ನೊಬ್ಬರು –ವಿರುದ್ಧ– ಸುಲೇಮಾನ್ ಬೀಬಿ ಮತ್ತು ಇತರರು***[6] ಪ್ರಕರಣದಲ್ಲಿ ಹೀಗೆ ಅಭಿಪ್ರಾಯಪಡಲಾಗಿದೆ:

"15. 'ಯುಕ್ತವಲ್ಲದ ಪ್ರಭಾವ' 'ಮೋಸ' ತಪ್ಪಾಗಿ ಅರ್ಥೈಸುವಿಕೆ ಇವುಗಳು ಒಂದೇ ನಮೂನೆಗಳಾಗಿವೆಯೆಂಬುದು ನಿಜವಾಗಿದ್ದಾಗ, ಭಾಗಶ:ವಾಗಿ ಕೆಲವು ಪ್ರಕರಣಗಳನ್ನು ವ್ಯಾಪಿಸಬಹುದಾಗಿದ್ದು, ಅವು ಹತ್ತಿರದ ಭಿನ್ನತೆಯ ಪ್ರವರ್ಗಗಳಾಗಿರುತ್ತವೆ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ 2ನೇ ನಿಯಮದ 6ನೇ ಆದೇಶದೊಂದಿಗೆ ಓದಲಾದ 4ನೇ ನಿಯಮದ 6ನೇ ಆದೇಶದ ದೃಷ್ಟಿಯಲ್ಲಿ ಪ್ರತ್ಯೇಕವಾಗಿ ವಾದಿಸುವುದನ್ನು, ವಿಶೇಷತ್ವ, ನಿರ್ದಿಷ್ಟತ್ವ ಮತ್ತು ಖಚಿತತೆಯಿಂದ

6.ಎಐಆರ್ 1976 ಎಸ್‌ಸಿ 163

ಕೂಡಿದ್ದು ಪ್ರತ್ಯೇಕವಾಗಿ ವಾದಿಸುವುದನ್ನು ಅಗತ್ಯಪಡಿಸುತ್ತವೆ, ವಾದಿಯು ಪ್ರತಿವಾದಿಯಲ್ಲಿ ಹೆಚ್ಚಿನ ನಂಬಿಕೆಯನ್ನು ಇಟ್ಟುಕೊಂಡಿದ ತೊಂಭತ್ತರ ಸರಳ ಮುದುಕನಾಗಿರುವನು ಎಂಬ ವಾದಪತ್ರದ ಸಾಮಾನ್ಯ ಆಪಾದನೆಯು, ನಿರ್ದಿಷ್ಟವಾಗಿ, ವಿವಾದಾಂಶವನ್ನು ಕ್ಲೇಮು ಮಾಡದಿದ್ದಾಗ ಮತ್ತು ಅಧಿವಿಚಾರಣಾ ನ್ಯಾಯಾಲಯದಲ್ಲಿ ಅಥವಾ ಮೊದಲ ಅಪೀಲು ನ್ಯಾಯಾಲಯದ ಮುಂದೆಯೂ ಸಹ ಯಾವುದೇ ಹಂತದಲ್ಲಿ ಆ ವಿಷಯ ಕುರಿತ ವಾದವನ್ನು ಎತ್ತದಿದ್ದಾಗ ಉಚ್ಚ ನ್ಯಾಯಾಲಯವು ಗಮನಕ್ಕೆ ತೆಗೆದುಕೊಳ್ಳಬಹುದಾದ ಯುಕ್ತವಲ್ಲದ ಪ್ರಭಾವದ ದೃಢಹೇಳಿಕೆಗೆ ಸರಿಸಮವಾಗುವಷ್ಟು ಅತಿಯಾದ ಕೊರತೆಯುಳ್ಳದ್ದಾಗಿರುತ್ತದೆ.”

21. ***ಲಧ್ಲಿ ಪ್ರಸಾದ್ ಜೈಸ್ವಾಲ್ –ವಿರುದ್ಧ– ದಿ ಕರ್ನೋಲ್ ಡಿಸ್ಟಿಲರಿ ಕಂಪನಿ ಲಿಮಿಟೆಡ್, ಕರ್ನೂಲ್ ಮತ್ತು ಇತರರು***[7] ಪ್ರಕರಣದಲ್ಲಿ, ವಿವಾದಾಂಶಗಳ ವಿವಾದವನ್ನು ತಗ್ಗಿಸಲು ಮತ್ತು ಅವರ ಪ್ರಕರಣವನ್ನು ಸಮರ್ಥಿಸುವಲ್ಲಿ ಎರಡೂ ಕಡೆಯಿಂದ ಅಗತ್ಯಪಡಿಸಲಾದ ಸಾಕ್ಷ್ಯದ ಸ್ವರೂಪದ ಪಕ್ಷಕಾರರಿಗೆ ನೋಟೀಸು ನೀಡುವ ಸಲುವಾಗಿ ವಿವಾದದಲ್ಲಿರುವ ವಿಷಯದ ಬಗ್ಗೆ ಅವರ ಗಮನವನ್ನು ಕೇಂದ್ರೀಕರಿಸುವ ಮೂಲಕ ಅಧಿವಿಚಾರಣಾ ನ್ಯಾಯಾಲಯಕ್ಕೆ ಪಕ್ಷಕಾರರನ್ನು ಕರೆತರುವುದು, ವಾದದ ಉದ್ದೇಶವಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿದೆ. ಅಸ್ಪಷ್ಟ ಅಥವಾ ಸಾಮಾನ್ಯ ವಾದವು ಎಂದೂ ಈ ಉದ್ದೇಶವನ್ನು ಈಡೇರಿಸಲಾಗದು; ವಾದಿಸುವ ಪಕ್ಷಕಾರನು ಮೋಸದ ಖಚಿತ ಸ್ವರೂಪವನ್ನು, ಬಳಸಲಾದ ರೀತಿಯನ್ನು ಮತ್ತು ಪಡೆದುಕೊಳ್ಳಲಾದ ಯುಕ್ತವಲ್ಲದ ಅನುಕೂಲವನ್ನು ವಾದಿಸಬೇಕಾಗುತ್ತದೆ. ಅನಿರೀಕ್ಷಿತ ರೀತಿಯಲ್ಲಿ ತೆಗೆದುಕೊಳ್ಳುವ ಮೂಲಕ ವಿವಾದವನ್ನು ತಗ್ಗಿಸಲು ಮತ್ತು ಯುಕ್ತವಲ್ಲದ ನಡತೆಯೊಂದಿಗೆ ಆರೋಪಿಸಲಾದ ಪಕ್ಷಕಾರರನ್ನು ಸಂರಕ್ಷಿಸಲು ಈ ನಿಯಮವನ್ನು ರೂಪಿಸಲಾಗಿದೆ.”

22. ***ವೆಲ್ಲಿಂಗ್‌ಫೋರ್ಡ್ –ವಿರುದ್ಧ– ಮ್ಯೂಚುಯಲ್ ಫಂಡ್ ಸೊಸೈಟಿಯ***[8] ಪ್ರಕರಣದಲ್ಲಿ ಮಾನ್ಯ ಸೆಲ್‌ಬಾರ್ನ್‌ರವರ ಅಭಿಪ್ರಾಯವನ್ನು ಉದ್ಧೃತಗೊಳಿಸುವುದು ಉಪಯುಕ್ತವಾದುದಾಗಿದೆ.

7. ಎಐಆರ್ 1963 ಎಸ್‌ಸಿ 1279

8. (1818)5 ಎಸಿ 685

"ಮೋಸಕ್ಕೆ ಸಂಬಂಧಿಸಿದಂತೆ, ಪರಿಪೂರ್ಣವಾಗಿರುವ ಸುಸ್ಥಾಪಿತ ಯಾವುದೇ ತತ್ವವಿದ್ದರೆ, ಅದು, ಯಾವುದೇ ನ್ಯಾಯಾಲಯವು ಗಮನಕ್ಕೆ ತೆಗೆದುಕೊಳ್ಳಲೇಬೇಕಾದ ಮೋಸದ ದೃಢೋಕ್ತಿಗೆ ಕಾರಣವಾಗಿದ್ದರೂ ಕೂಡ ಅದರಲ್ಲಿ ತಿಳಿಸಿರುವ ಪದಗಳು ಬಲಯುತ ವಾಗಿರಬಹುದಾಗಿದ್ದರೂ ಸಾಮಾನ್ಯ ಆಪಾದನೆಗಳು ಸಾಕಷ್ಟಿರುವುದಿಲ್ಲ ಎಂಬುದಾಗಿದೆ."

23. ***ಎ.ಸಿ. ಅನಂತಸ್ವಾಮಿ ಮತ್ತು ಇತರರು –ವಿರುದ್ಧ– ಬೋರಯ್ಯ (ಮೃತರಾಗಿರುವುದರಿಂದ)***[9] ಇವರ (ಕಾನೂನು ಸಮ್ಮತ ವಾರಸುದಾರರ ಮೂಲಕ ಪ್ರಕರಣದಲ್ಲಿ ಇದನ್ನು ಹೀಗೆ ಅಭಿಪ್ರಾಯಪಡಲಾಗಿದೆ.

"ಮೋಸ ನಡೆದಿರುವುದಕ್ಕೆ ಸಂಬಂಧಪಟ್ಟಂತೆ ವಾದಿಸಿ ರುಜುವಾತು ಪಡಿಸಬೇಕಾಗುತ್ತದೆ. ಮೋಸ ನಡೆದಿರುವುದನ್ನು ರುಜುವಾತುಪಡಿಸಲು, ಪಕ್ಷಕಾರನು ಅಂಥ ನಿವೇದನೆಯು ತಪ್ಪು ತಿಳುವಳಿಕೆಯು ನಿವೇದನೆಯಾಗಿದೆಯೆಂಬುದನ್ನು ಅಥವಾ ಪಕ್ಷಕಾರನು ಅದು ನಿಜವಾಗಿತ್ತು ಎಂಬುದರ ಬಗ್ಗೆ ಯುಕ್ತ ನಂಬಿಕೆಯನ್ನು ಹೊಂದಿರಲಿಲ್ಲವೆಂಬುದನ್ನು ರುಜುವಾತುಪಡಿಸಬೇಕು. ಅಂಥ ಪ್ರಕರಣಗಳಲ್ಲಿ ಅಗತ್ಯಪಡಿಸಲಾದ ರುಜುವಾತಿನ ಮಟ್ಟವು, ಅತ್ಯಂತ ಹೆಚ್ಚಿನದ್ದಾಗಿರುತ್ತದೆ."

24. ***ಕೆಂಚವ್ವ –ವಿರುದ್ಧ– ಅಮೊಗೊಂಡ ಮತ್ತು ಇತರರು***[10] ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು "ಮೋಸ ನಡೆದಿರುವುದನ್ನು ಅಥವಾ ತಪ್ಪಾಗಿ ಅರ್ಥೈಸಿರುವುದನ್ನು ವಾದಿಸುವ ಪಕ್ಷಕಾರನು, ವಿವರಗಳನ್ನು ವಾದಿಸಬೇಕಿರುವುದು ಅಷ್ಟೇ ಅಲ್ಲ, ಅಂಥ ಆಪಾದನೆಯ ಸಮರ್ಥನೆಯಲ್ಲಿ ಸಾಕ್ಷ್ಯವನ್ನು ಮುಂದಿಡಬೇಕು, ಮಾನ್ಯ ನ್ಯಾಯಾಧೀಶರ ಮಾತಿನಲ್ಲಿ, "Facta Probantia" ಗಳು ಒಬ್ಬರಿಂದ ಒಬ್ಬರಿಗೆ ಬದಲಾಗುತ್ತದೆ ಮತ್ತು ನ್ಯಾಯಾಲಯದ

9. 2004(8) ಎಸ್‌ಸಿಸಿ 588

10. ಎಐಆರ್ 2003 ಕೆಎಎನ್‌ಟಿ 434(ಡಿಬಿ)

ಕಾನೂನು, "Facta Probantia" ಅಥವಾ "Facta Probantia ಅನುಸಾರ ಮಾತ್ರ ಕಾರ್ಯನಿರ್ವಹಿಸುವಂಥ ವ್ಯಾಜ್ಯಕಾರನ ಹೆಸರಿನಲ್ಲಿ ಪ್ರಕರಣವನ್ನು ವಿವರಿಸಲು ಸಮರ್ಥವಾಗಿರುವುದಿಲ್ಲ. ಸಾಕ್ಷ್ಯದ 13ನೇ ಆವೃತ್ತಿಯ 933ನೇ ಪುಟದಲ್ಲಿ ಸರ್ಕಾರ್ ಹೀಗೆ ಹೇಳಿದ್ದಾರೆ:

> "ಮತ್ತೊಬ್ಬ ವ್ಯಕ್ತಿಗೆ ಮೋಸವನ್ನು ಆರೋಪಿಸುವ ವ್ಯಕ್ತಿಯು ಮೋಸವನ್ನು ಅವನೇ ರುಜುವಾತುಪಡಿಸಬೇಕು, ಮತ್ತು ಪ್ರತಿವಾದಿಯು ಸತ್ಯವಲ್ಲದ ಕಥೆಯನ್ನು ಹೇಳುವ ಕಾರಣದಿಂದ ಈ ಹೊಣೆಗಾರಿಕೆಯಿಂದ ಅವನು ಬಿಡುಗಡೆಯಾಗಿರುವುದಿಲ್ಲ."

25. ಅಪೀಲುದಾರನ ಆಕ್ಷೇಪಣೆಗಳ ಹೇಳಿಕೆಯಲ್ಲಿ, "ಮೋಸ"ಎಂಬ ಪದದ ಬಳಕೆಗೆ ಹೊರತುಪಡಿಸಿ ಈ ಪ್ರಕರಣದ ಸಂಗತಿಗಳಿಗೆ ಹಿಂದೆ ಹೇಳಲಾದ ತತ್ವಗಳನ್ನು ಅನ್ವಯಿಸಿ, ವಿಶೇಷತ್ವ, ನಿರ್ದಿಷ್ಟತೆ ಮತ್ತು ಖಚಿತತೆಯೊಂದಿಗೆ ವಾದಿಸಲಾಗುವುದಿಲ್ಲ. ಆದುದರಿಂದ "ಮೋಸ" ಅಥವಾ "ಒಳಸಂಚು" ಪದದ ಬಳಕೆಯನ್ನು ವಾದಕ್ಕೆ ಸಂಬಂಧಿಸಿದ ಅಡಿಪಾಯವಾಗಿ ಬಳಸಲಾಗುವುದಿಲ್ಲ ಅಂಥ ಪದಾವಳಿಗಳನ್ನು ನಿಸ್ಸಂದೇಹವಾಗಿ, ಸಂಗತಿಗಳ ನಿರ್ದಿಷ್ಟ ವಿವರಣೆಯನ್ನು ಬಯಲು ಮಾಡಿದರೆ, ಅದೊಂದೇ ಕ್ರಮದ ಅಗತ್ಯ ಆಧಾರವನ್ನು ಒದಗಿಸಬಲ್ಲುದಾಗಿದ್ದು, ಕಾನೂನು ಆಧಾರವನ್ನು ರೂಪಿಸಲು ಪೂರ್ಣ ಪ್ರಮಾಣದಲ್ಲಿ ಪರಿಣಾಮಕಾರಿಯಾಗಿರುವುದಿಲ್ಲ. ಮಾಲೀಕ/ವಿಮಾಕರ್ತನು, ಹಬೀಬುಲ್ಲಾ ಖಾನ್‌ನೊಂದಿಗೆ ಆರೋಪಿಸಲಾದಂಥ ಪೊಲೀಸು ಅಧಿಕಾರಿಗಳೊಂದಿಗೆ ಸೇರಿ ಮೋಸ, ತಪ್ಪು ಅರ್ಥ ಮತ್ತು ಒಳಸಂಚಿನ ಆಪಾದನೆಗಳನ್ನು ನಿರೂಪಿಸುವ ಸಲುವಾಗಿ, ಆಕ್ಷೇಪಣೆಗಳ ವಿವರಣೆಗಳಲ್ಲಿರುವ ದೃಢೋಕ್ತಿಗಳನ್ನು ಯುಕ್ತ ಖಚಿತತೆಯೊಂದಿಗೆ, ವಿವರಗಳೊಂದಿಗೆ ನಿರೂಪಿಸಿಲ್ಲ.

26. ಆ ಹಿನ್ನೆಲೆಯಲ್ಲಿ ನೋಡಿದಾಗ, ಮೋಸ, ಒಳಸಂಚು ಮತ್ತು ತಪ್ಪು ನಿರೂಪಣೆಯ ಸದರಿ ವಾದದ ಮೇಲೆ ಮೋ.ವಾ.ಅ.ಕ್ಲೇ.ನ್ಯಾ.ವು ವಿವಾದಾಂಶವನ್ನು ರೂಪಿಸದಿರುವುದು ಸಮರ್ಥನೀಯವಾಗಿದೆ.

27. ಈ ಸನ್ನಿವೇಶಗಳಲ್ಲಿ, 'ಅಧಿನಿಯಮದ' 175ನೇ ಪ್ರಕರಣದೊಂದಿಗೆ ಓದಲಾದ 165ನೇ ಪ್ರಕರಣವು, ಕರಾರು ಅಧಿನಿಯಮ, 1872ರ 17ನೇ ಪ್ರಕರಣದ ಮೇರೆಗೆ ಪರಿಭಾಷಿಸಲಾದಂತೆ ಮೋಸದ ಆಧಾರದ ಮೇಲೆ ನಷ್ಟ ಭರ್ತಿಯ ಕರಾರಿನ ನಿಬಂಧನೆಗಳನ್ನು ಉಲ್ಲಂಘಿಸುವುದಕ್ಕೆ ಸಂಬಂಧಿಸಿದ ಕ್ಲೇಮನ್ನು ಸ್ವೀಕರಿಸುವ ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಪ್ರಕಟಪಡಿಸಿದೆಯೆಂದು ವಾದಿಸಲು ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ವಕೀಲರ ಒಣ ಪ್ರಯತ್ನದಲ್ಲಿ ಯಾವುದೇ ಹುರುಳಿಲ್ಲ. ನಷ್ಟಭರ್ತಿ ಕರಾರನ್ನು ಮಾಡಿಕೊಳ್ಳುವಾಗ ಆಗಲಿ ಅಥವಾ ಸದರಿ ಕರಾರಿನ ನಿಬಂಧನೆಗಳ ಉಲ್ಲಂಘಿಸುವಾಗ ಆಗಲಿ, ಮೋಸದ, ಯುಕ್ತವಲ್ಲದ ಪ್ರಭಾವದ ಅಥವಾ ಒಳಸಂಚಿನ ವಿಷಯದಲ್ಲಿ ವಿಮಾಗಾರ ಮತ್ತು ವಿಮಾಕರ್ತನ ನಡುವೆ ಇರುವಂಥ ದಾವೆಯನ್ನು ಪುರಸ್ಕರಿಸಲು ಸಿವಿಲ್ ನ್ಯಾಯಾಲಯದ ಅಧಿಕಾರ, ವ್ಯಾಪ್ತಿಯನ್ನು ವ್ಯಕ್ತವಾಗಿಯಾಗಲಿ ಅಥವಾ ಇಂಗಿತವಾಗಿ ಆಗಲಿ 175ನೇ ಪ್ರಕರಣದ ಮೂಲಕ ತಂತಾನೆ ಪ್ರತಿಷೇಧಿಸಿದೆ ಬೇರೇನೂ ಅಲ್ಲ.

28. ***ರಾಜೇಶ್ ಸಿಂಗ್,*** ಪ್ರಕರಣ ಮತ್ತು ನಿಕೊಲೆಟ್ಟ ರೋಹ್ವಗಿ ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು, ಸಕ್ಷಮ ಸಿವಿಲ್ ನ್ಯಾಯಾಲಯದ ಮುಂದೆ ನಷ್ಟಭರ್ತಿಯ ಕರಾರಿನ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸುವ ಸಂಬಂಧ ದಾವೆಯನ್ನು ಹೂಡಲು ಕರಾರು ಮಾಡಿಕೊಳ್ಳುವ ಪಕ್ಷಕಾರರ ಹಕ್ಕನ್ನು ವ್ಯಕ್ತ ನಿಬಂಧನೆಗಳಲ್ಲಿ ನಿರಾಕರಿಸಿರಲಿಲ್ಲ.

29. ***ರಾಜೇಂದ್ರ ಸಿಂಗ್*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಹೆಚ್ಚಿನ ಮಟ್ಟದ ಮೋಸಕ್ಕೆ ಕಾರಣವಾದ ಸಂಗತಿಗಳನ್ನು ಹೊಸದಾಗಿ ಹುಡುಕಿದ ಆಧಾರದ ಮೇಲೆ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳುವ ಸಂಬಂಧ ಪರಿಹಾರವನ್ನು ಕೋರುವುದರಲ್ಲಿ "ಯಾವುದೇ ಸಂದೇಹ" ಇಲ್ಲವೆಂದು ಮತ್ತು "ಕ್ಲೇಮಿನ ವಾಸ್ತವ ಆಧಾರವನ್ನು ಬಾಧಕಗೊಳಿಸಬಹುದಾದಂಥ ಅಳತೆಯ ಮೋಸ ಅಥವಾ ತಪ್ಪು ಅರ್ಥದ ಮೂಲಕ ಆದೇಶವು ಕೃತಕತೆಯಿಂದ ಕೂಡಿದೆಯೆಂಬುದನ್ನು ಮನಗಾಣಿಸಿದರೆ ತನ್ನದೇ ಆದ ಆದೇಶವನ್ನು ಹಿಂಪಡೆಯಲು ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಸಮರ್ಥವಾದುದೆಂಬುದಕ್ಕೆ ಸಂಬಂಧಪಡಬಹುದಾಗಿದೆ ಎಂದು ಅಭಿಪ್ರಾಯಪಟ್ಟಿದೆ."

(ಒತ್ತು ನೀಡಲಾಗಿದೆ)

30. ***ನಿಕೊಲೆಟ್ಟ ರೋಹಟಗಿ*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, "ಕ್ಲೇಮುದಾರರು ಮತ್ತು ವಿಮಾಕರ್ತ ಅಥವಾ ವಿಮಾಗಾರನ ಮಧ್ಯೆ ಒಳಸಂಚು ನಡೆದಿದ್ದಲ್ಲಿ ಆ ಸಂದರ್ಭದಲ್ಲಿ ಕ್ಲೇಮನ್ನು ಪ್ರತಿರೋಧಿಸುವುದಿಲ್ಲವೆಂದು, ಅಷ್ಟೇ ಅಲ್ಲದೆ ನ್ಯಾಯಾಧಿಕರಣವು, ಅಂಥ ಸಂದರ್ಭಗಳಲ್ಲಿ ಕ್ಲೇಮನ್ನು ಪ್ರತಿರೋಧಿಸಲು ವಿಮಾ ಕಂಪನಿಯನ್ನು ದಾವೆಗೆ ಸೇರಿಸುವುದಿಲ್ಲವೆಂದು, ವಿಮಾ ಕರ್ತನಿಗೆ ಅಥವಾ ಯಾರ ವಿರುದ್ಧ ಕ್ಲೇಮನ್ನು ಹೂಡಲಾಗಿದೆಯೋ ಆ ವ್ಯಕ್ತಿಗೆ ಲಭ್ಯವಿರುವ ಆಧಾರದ ಮೇಲೆ ಕ್ಲೇಮನ್ನು ಪ್ರತಿರೋಧಿಸಲು ನ್ಯಾಯಾಧಿಕರಣದ ಅನುಮತಿಯನ್ನು ಕೋರಲು ವಿಮಾಕರ್ತನು ಮುಕ್ತವಾಗಿರುವನು" ಎಂದು ಅಭಿಪ್ರಾಯಪಟ್ಟಿದೆ.

31. ಸರ್ವೋಚ್ಚ ನ್ಯಾಯಾಲಯದ ಹಿಂದೆ ಹೇಳಲಾದ ಎರಡು ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು, ಈ ಪ್ರಕರಣದ ಸಂಗತಿಗಳ ಮೇಲೆ, ಅಪೀಲುದಾರ/ ವಿಮಾಕರ್ತನು ಹೊಣೆಗಾರಿಕೆಯನ್ನು ದೃಢಪಡಿಸಲು ಮತ್ತು ನಷ್ಟಪರಿಹಾರವನ್ನು ವಸೂಲಿ ಮಾಡುವ ಉದ್ದೇಶದೊಂದಿಗೆ ನಷ್ಟಪರಿಹಾರಕ್ಕಾಗಿ ಕ್ಲೇಮು ಅರ್ಜಿಯನ್ನು ಹೂಡಲು ಮೊದಲ ಎದುರುದಾರ/ಹಬೀಬುಲ್ಲಾ ಖಾನ್ ಅಥವಾ ಆಪಾದಿತ ಮೋಟಾರು ಸೈಕಲ್‌ನ ಮಾಲೀಕ/ವಿಮಾಕರ್ತ ಮತ್ತು ಪೊಲೀಸು ಅಧಿಕಾರಿಗಳೊಂದಿಗೆ ಕ್ಲೇಮುದಾರನು ಸಂಚನ್ನು ಹೂಡಿರುವನು ಎಂಬುದನ್ನು ರುಜುವಾತುಪಡಿಸಲು ಯಾವುದೇ ಸಾಕ್ಷ್ಯದ ಪ್ರಮಾಣಗಳಿಲ್ಲ ಎಂಬುದನ್ನು ತೋರಿಸುವುದು ಅನಗತ್ಯ. ಕ್ಲೇಮುದಾರನ ವಿರುದ್ಧದ ಅಂಥ ಆಪಾದನೆಯ ಗಣನೀಯ ಕಾನೂನು ಸಾಕ್ಷ್ಯ ರೂಪಿಸಿರುವ ಸಂಬಂಧಪಟ್ಟ ಸಾಕ್ಷ್ಯಾಧಾರಗಳಿಲ್ಲದೆ, ಅಪೀಲುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ನಿವೇದನೆಗಳು ಅಗತ್ಯವಾಗಿ ವಿಫಲವಾಗಿವೆ.

32. ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಸರಿಯಾಗಿ ಪರಿಗಣಿಸಿದ ನಂತರ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಯುಕ್ತ ಗುಣಾರ್ಹತೆಗಳಿಂದ ಸಂಪೂರ್ಣವಾಗಿ ಸಮರ್ಥಿಸಲಾಗಿದೆ ಮತ್ತು ಈ ತೀರ್ಪಿನಲ್ಲಿ ಕಾನೂನಿನಲ್ಲಿ ಯಾವುದೇ ದೌರ್ಬಲ್ಯ ಇರುವುದನ್ನು ಅಥವಾ ಯಾವುದೇ ತರ್ಕ ವಿರುದ್ಧದ ಕಾರಣದಿಂದ ಸಾಕ್ಷ್ಯವಿಲ್ಲದ್ದನ್ನು ತೋರಿಸಿಲ್ಲ ಹಾಗಾಗಿ ಇಲ್ಲಿ, ವಿಭಿನ್ನ ಅಂತ್ಯ ಮತ್ತು ಹಸ್ತಕ್ಷೇಪ ಮಾಡುವ ಅಗತ್ಯವು ಕಂಡುಬರುವುದಿಲ್ಲ.

33. ಈ ಸನ್ನಿವೇಶಗಳಲ್ಲಿ ಮೇಲೆ ರೂಪಿಸಲಾದ ಸಮೀಕರಣಕ್ಕೆ ಸಕಾರಾತ್ಮಕವಾಗಿ ಉತ್ತರಿಸಿದ್ದು, ಅಪೀಲುದಾರನಿಗೆ ವಿರುದ್ಧವಾಗಿರುತ್ತದೆ.

34. ಏನೇ ಆದಾಗ್ಯೂ, ದರ್ಪದ ವರ್ತನೆಯ ಸ್ವಪ್ರತಿಷ್ಠೇ ಸ್ವಭಾವದ, ಮೋಟಾರು ವಾಹನಗಳಿಂದ ಆದ ಅಪಘಾತದ ಸಂತ್ರಸ್ತರ ತತ್ವ ನಿವಾರಣೆಯ ಗುರಿಹೊಂದಿದ್ದು 'ಅಧಿನಿಯಮ'ವು ಉಪಯುಕ್ತ ಶಾಸನವಾಗಿದ್ದರೂ, ನಷ್ಟಪರಿಹಾರವನ್ನು ಉಳಿಸಿಕೊಡುವುದರಿಂದ ಕ್ಲೇಮುದಾರನನ್ನು ನಿರಾಶಾದಾಯಕವಾಗಿ ಮಾಡುವ ಉದ್ದೇಶದಿಂದ ಹಿಂದೆ ಹೇಳಲಾದ ಆಪಾದನೆಗಳನ್ನು ಯಾರ ವಿರುದ್ಧ ಮಾಡಲಾಗಿದೆಯೋ ಅವರ ವ್ಯವಹರಣೆಗೆ ಪಕ್ಷಕಾರನಾದ ಪೊಲೀಸರು ಇಲ್ಲದಿರುವಾಗ, ಮೋಸ, ತಪ್ಪು ಅಭಿಪ್ರಾಯ ಅಥವಾ ಒಳಸಂಚಿನ ವಿರುದ್ಧ ಯಾವುದೇ ಪ್ರಕರಣವನ್ನು ದಾಖಲಿಸಿಲ್ಲವೆಂಬುದನ್ನು, ಅಪೀಲನ್ನು ಹೂಡಿರುವುದನ್ನು ವಿಮಾಕಂಪನಿಯು ಸಂಪೂರ್ಣವಾಗಿ ಅರಿತಿದೆ. ಈ ಕಾರಣದಿಂದ ಅಂಥ ಪದ್ಧತಿಯನ್ನು ಖಂಡಿಸುವಾಗ ಮತ್ತು ಅಪೀಲನ್ನು ವಜಾಗೊಳಿಸುವಾಗ, ***ನ್ಯೂ ಇಂಡಿಯಾ ಅಶ್ಯುರೆನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ– ಕಿರಣ್ ಸಿಂಗ್ ಮತ್ತು ಇತರರು***[11] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ವೆಚ್ಚವನ್ನು ವಿಧಿಸುವ ಅಗತ್ಯವಿರುತ್ತದೆ.

35. ಅಪೀಲನ್ನು ವಜಾಗೊಳಿಸಲಾಗಿದೆ. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರಿಗೆ 10,000/– ರೂ.ಗಳಿಗೆ ನಿರ್ಧರಿಸಿದ ಮೊತ್ತವನ್ನು ಜಮೆ ಮಾಡಬೇಕಾಗುತ್ತದೆ. ಜಮೆಯಾದ ಮೊತ್ತವನ್ನು ಮೋಟಾರು ವಾಹನಗಳ ಅಪಘಾತ ಕ್ಲೇಮು ನ್ಯಾಯಾಧಿಕರಣಕ್ಕೆ ಕೂಡಲೇ ವರ್ಗಾಯಿಸಲು ಸೂಚಿಸಲಾಗಿದೆ.

---

11. ಎಐಆರ್ 2004 ಎಸ್‌ಸಿ 3884